**ಸಾಕ್ಷಿಯನ್ನು ದಿನಾಂಕ 22.07.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ ಪಿಎಸ್ ಬಿ ವಕೀಲರಿಂದಃ**

1. ನಾನು ಮತ್ತು ವಾದಿ ಹೆಚ್ಚು ಕಮ್ಮಿ ಒಂದೇ ಜೊತೆಯವರು ಎಂದರೆ ಸರಿ. ನಾನು ವಾದಿ ಮತ್ತು 1 ನೇ ಪ್ರತಿವಾದಿ ಒಂದೇ ಊರಿನ ವಾಸಿಗಳು ಎಂದರೆ ಸರಿ. ವೆಂಕಟಶಿವ ಬೆಂಗಳೂರಿನಲ್ಲಿ ವಾಸವಾಗಿದ್ದರು ಎಂದರೆ ಸರಿ. ನನಗೂ ಮತ್ತು ವೆಂಕಟಶಿವರವರಿಗೂ ಯಾವುದೇ ಒಡನಾಟ ಇರಲಿಲ್ಲ ಎಂದರೆ ಸರಿ. ವೆಂಕಟಶಿವರವರು ಸಹಿ ಮಾಡಿದ ಯಾವುದೇ ದಾಖಲೆಯನ್ನು ನಾನು ನೋಡಿಲ್ಲ ಎಂದರೆ ಸಾಕ್ಷಿ ನೋಡಿದ್ದೇನೆಂದು ನುಡಿಯುತ್ತಾರೆ. ನನಗೂ ಮತ್ತು ವೆಂಕಟಶಿವರವರಿಗೂ ಒಡನಾಟ ಇಲ್ಲದಿದ್ದರೂ ಸಹಿ ಮಾಡಿದ್ದನ್ನು ಯಾವಾಗ ನೋಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಊರಿನಲ್ಲಿದ್ದಾಗ 1 ನೇ ಪ್ರತಿವಾದಿ ನನ್ನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದರು, 1 ನೇ ಪ್ರತಿವಾದಿ ವೆಂಕಟಶಿವರವರಿಗೆ ಹಣ ನೀಡಿದ್ದರು ಮತ್ತು ಸಹಿ ಪಡೆದಿದ್ದರು.

2. ನಾನು ಊರಿನಲ್ಲಿದ್ದಾಗ 1 ನೇ ಪ್ರತಿವಾದಿ ನನ್ನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದರು, 1 ನೇ ಪ್ರತಿವಾದಿ ವೆಂಕಟಶಿವರವರಿಗೆ ಹಣ ನೀಡಿದ್ದರು ಮತ್ತು ಸಹಿ ಪಡೆದಿದ್ದರು ಎಂಬ ವಿಚಾರವನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವೆಂಕಟಶಿವರವರ ಸಹಿಯನ್ನು ನೋಡಿದ್ದೇನೆಂದು ಹೇಳಿಯೇ ಇಲ್ಲ ಎಂದರೆ ಸರಿಯಲ್ಲ. ನಾನು ಊರಿನಲ್ಲಿದ್ದಾಗ 1 ನೇ ಪ್ರತಿವಾದಿ ನನ್ನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿಲ್ಲ,

1 ನೇ ಪ್ರತಿವಾದಿ ವೆಂಕಟಶಿವರವರಿಗೆ ಹಣ ನೀಡಿಲ್ಲ, ಅ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

consent deed ಎಂದರೆ ಏನು ಎಂದು ನನಗೆ ಗೊತ್ತು. ನಾನು 7 ನೇ ತರಗತಿಯವರೆಗೂ ಕಲಿತಿದ್ದೇನೆ. consent deed ಎಂದರೆ ಏನು ಎಂದರೆ ಸಾಕ್ಷಿ ನನಗೆ ಅರ್ಥ ಆಗುತ್ತಿಲ್ಲ ಎಂದು ನುಡಿಯುತ್ತಾರೆ. consent deed ಎಂಬ ಪದವನ್ನು ನಾನು ಇದೇ ಮೊದಲ ಬಾರಿಗೆ ಕೇಳುತ್ತಿದ್ದೇನೆಂದರೆ ಸರಿ. ವೆಂಕಟಶಿವರವರ ನನ್ನ ಸಮಕ್ಷಮ ಯಾವುದೇ ಸಹಿಯನ್ನು ಮಾಡಿಲ್ಲ ಎಂದರೆ ಸಾಕ್ಷಿ ವೆಂಕಟಶಿವರವರು ಬೆಂಗಳೂರಿನ Court ನಲ್ಲಿ ಸಹಿ ಮಾಡಿದ್ದರು ಎಂದು ನುಡಿಯುತ್ತಾರೆ. ವೆಂಕಟಶಿವರವರು ನನ್ನ ಎದುರಿಗೆ Court ನಲ್ಲಿ ಸಹಿ ಮಾಡಿಲ್ಲ, ಅ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು, ವಾದಿ ಮತ್ತು 1 ನೇ ಪ್ರತಿವಾದಿ ಒಂದೇ ಊರಿನಲ್ಲಿ ವಾಸವಿರುವುದರಿಂದ ನಾನು ಕಳೆದ ಬಾರಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ದಾಖಲೆಯನ್ನು ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ಅ ದಾಖಲೆಯಲ್ಲಿರುವ ವೆಂಕಟಶಿವ ಎಂಬುವವರ ಸಹಿಯನ್ನು ನಾವುಗಳೇ ಸೃಷ್ಟಿಸಿದ್ದೇವೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.